





# ಕಾಕ್‌ಟೈಲ್ ಆಭರಣ

ಹೆಣ್ಣಿಗೆ ಆಭರಣ ಇಲ್ಲದೆ ಅಲಂಕಾರ ಅಪೂರ್ಣ. ಎಷ್ಟೇ ಅಂದದ ಸೀರೆ ಉಟ್ಟರೂ ಅದಕ್ಕೊಪ್ಪುವ ಹಾಗೆ ಆಭರಣ ತೊಟ್ಟರೆ ಮಾತ್ರ ಆಕೆಗೆ ಶೋಭೆ. ಬೆಲೆ ಗಗನಮುಖಿಯಾಗುತ್ತಿದ್ದರೂ ಆಭರಣದ ಬೇಡಿಕೆ ಮಾತ್ರ ಎಂದೆಂದೂ ಕಡಿಮೆಯಾಗುವುದೇ ಇಲ್ಲ. ಹೀಗಾಗಿ ನೂತನ ವಿನ್ಯಾಸದ, ನಾಜೂಕು ಕುಸುರಿ ಕೆಲಸದ, ವಿನೂತನ ಕಲೆಗಾರಿಕೆಯ, ವಿಭಿನ್ನ ಬಣ್ಣದ ಹರಳುಗಳಿಂದ ಕೂಡಿದ ಆಭರಣ ಹೊಸ ರೂಪದೊಂದಿಗೆ ಮಾರುಕಟ್ಟೆಗೆ ಬರುತ್ತಲೇ ಇರುತ್ತದೆ. ಒಡವೆ ಪ್ರಿಯರಿಗೆ ಸಾಕಷ್ಟು ಆಯ್ಕೆಗಳೂ ಇರುತ್ತವೆ.

ಆ್ಯಂಟಿಕ್ ಆಭರಣ, ಫ್ಯಾಷನೆಬಲ್ ಆಭರಣ, ಬ್ರೈಡಲ್ ಆಭರಣ, ಉಡುಪಿಗೆ ಮ್ಯಾಚಿಂಗ್ ಮಾಡಲೆಂದೇ ಬಣ್ಣಬಣ್ಣದ ಹರಳುಗಳಿಂದ ಕೂಡಿದ ವೈವಿಧ್ಯಮಯ ಆಭರಣ ಇಂದು ಪೈಪೋಟಿ ನಡೆಸುತ್ತಿದೆ. ಇಂದಿನ ಫ್ಯಾಷನ್‌ಗೆ, ಟ್ರೆಂಡ್‌ಗೆ, ಬಜೆಟ್‌ಗೆ ತಕ್ಕಂತೆ ಮಹಿಳೆಯರೂ ಆಭರಣಕ್ಕೆ ಮುಗಿ ಬೀಳುತ್ತಾರೆ. ಇದೀಗ ಎಲ್ಲ ಆಭರಣ ಶೈಲಿಗಳನ್ನೂ ಮಿಕ್ಸ್ ಮಾಡಿದ ಆಭರಣ 'ಕಾಕ್‌ಟೈಲ್' ಹೆಸರಿನಲ್ಲಿ ಬಂದಿದೆ.



'ಆಧುನಿಕ ಮಹಿಳೆಯರ ಮನೋಭಾವವನ್ನು ಅರಿತು ಫ್ಯಾಷನೆಬಲ್ ಆಗಿ ಮಾಡಿರುವ ಈ ಆಭರಣಗಳು ಫ್ಯಾಷನ್ ಜಗತ್ತಿನಲ್ಲಿ ಹೊಸ ಪರಿಕಲ್ಪನೆ ಮತ್ತು ಟ್ರೆಂಡ್ ಕೂಡ ಆಗಿದೆ. ಬಣ್ಣ, ವಿನ್ಯಾಸಗಳಲ್ಲಿ ಇದು ಆಕರ್ಷಕವೂ ಆಗಿದೆ. ಚಿನ್ನದಾಭರಣ ದಲ್ಲಿ ಬೇಕಾದಷ್ಟು ವೈವಿಧ್ಯಗಳಿವೆ. ವಜ್ರ, ಬೆಳ್ಳಿ, ಪ್ಲಾಟಿನಂ ಮುಂತಾದ ದುಬಾರಿ ಲೋಹಗಳಲ್ಲೂ ಸಾಕಷ್ಟು ಆಯ್ಕೆಗಳಿವೆ. ಇದೀಗ ಕಾಕ್‌ಟೈಲ್ ಜ್ಯುವೆಲ್ಲರಿ ಹೊಸದಾಗಿ ಬಂದಿದ್ದು, ಇದು ಆಭರಣ ಪ್ರಪಂಚಕ್ಕೆ ಹೊಸ ಸೇರ್ಪಡೆ.

ಹಾಗೆ ನೋಡಿದರೆ ಕಾಕ್‌ಟೈಲ್ ಜ್ಯುವೆಲ್ಲರಿ 20ನೇ ಶತಮಾನದಲ್ಲೇ ಕಾಸ್ಟ್ಯೂಮ್ ಜ್ಯುವೆಲ್ಲರಿ ಹೆಸರಿನಲ್ಲಿ ಬಂದಿತ್ತು ಎನ್ನುತ್ತದೆ ಇತಿಹಾಸ. ಆದರೆ ವಿನ್ಯಾಸದಲ್ಲಿ ಹೊಸತನವನ್ನು ಕಾಪಾಡಿಕೊಂಡು ಬಂದಿರುವುದು ಅಲ್ಲದೆ ಸಮಕಾಲೀನ ಫ್ಯಾಷನ್ ಶೈಲಿಯನ್ನು ಅನುಸರಿಸಿ ಈ ಕಾಕ್‌ಟೈಲ್ ಆಭರಣ ತಯಾರಿಸಲಾಗಿದೆ. ಸದ್ಯ ಈ ಆಭರಣಗಳನ್ನು ಪರಿಚಯಿಸಿರುವುದು 'ಆಭರಣ' ಜ್ಯುವೆಲ್ಲರಿ.

'ಪ್ರೈಮ ಡೋನ್ನ' ಸಂಗ್ರಹ ಹೆಸರಿನಲ್ಲಿ ಇದೀಗ ಬಂದಿರುವ ಆಭರಣದಲ್ಲಿ ಮಹಿಳೆಯರಿಗೆ ಹಲವು ಆಯ್ಕೆಗಳಿವೆ. ಕುಸುರಿ ಕಲೆಯಲ್ಲಿ, ಸೂಕ್ಷ್ಮತೆಯಲ್ಲಿ, ನಾಜೂಕು ತನದಲ್ಲಿ ಇದು ತೀರಾ ಅತ್ಯಾಧುನಿಕ ತಂತ್ರಜ್ಞಾನ ದಿಂದ ಕೂಡಿದೆ. ಹೀಗಾಗಿ ಈ ರೀತಿಯ ಆಭರಣಕ್ಕೆ ಇದೀಗ ಬಹಳ ಬೇಡಿಕೆಯೂ ಬಂದಿದೆ. ಪ್ರೈಮ ಡೋನ್ನ ಸಂಗ್ರಹದಲ್ಲಿ ಸಮಕಾಲೀನ ವಿನ್ಯಾಸದ (ಕಂಟೆಂಪರರಿ ಡಿಸೈನ್ಸ್) ಆಭರಣಗಳಿವೆ. ಇದು ಆಧುನಿಕ ಮನೋಭಾವದ ಯುವತಿಯರಿಗೆ, ಕಾಲೇಜು ಹುಡುಗಿಯರಿಗೆ ಎಲಿಗೆಂಟ್ ಲುಕ್ ಕೊಡುತ್ತದೆ.

'ಕಾಕ್‌ಟೈಲ್ ಆಭರಣ ಸಂಗ್ರಹದಲ್ಲಿ ರಿಂಗ್ಸ್, ಕಫ್ಸ್, ಕಿವಿಯೋಲೆ, ಹೂಪ್ಸ್ ಮತ್ತು ನೆಕ್ಲೇಸ್ ಸೆಟ್ ಲಭ್ಯ. ಇದರಲ್ಲಿ ವಜ್ರ, ಬಣ್ಣದ ಹರಳುಗಳನ್ನು ಯಥೇಚ್ಛವಾಗಿ ಬಳಸಲಾಗುತ್ತದೆ. ಅಲ್ಲದೆ 18 ಮತ್ತು 22 ಕ್ಯಾರಟ್ ಚಿನ್ನವನ್ನೂ ಈ ಕಾಕ್‌ಟೈಲ್ ಡಿಸೈನ್ ಒಡವೆಗಳಲ್ಲಿ ಬಳಸಲಾಗುತ್ತದೆ. ಒಂದೆಳೆಯ ಮುತ್ತಿನ ಸರಕ್ಕೆ ಚಿನ್ನದ ದೊಡ್ಡ ಪೆಂಡೆಂಟ್, ಅದೇ ಮಾದರಿಯ ಜುಮುಕಿ, ಚಿನ್ನ, ವಜ್ರದಲ್ಲಿ ಮಾಡಿದ ಸಮಕಾಲೀನ ವಿನ್ಯಾಸದ ಸರಗಳು, ಅತ್ತ ನೆಕ್ಲೇಸ್ ಕೂಡ ಅಲ್ಲ, ಇತ್ತ ಬರೀ ಸರವೂ ಅಲ್ಲ, ಇವೆರಡರ ಮಧ್ಯೆ ಇರುವ ಇನ್ಯಾವುದೋ ಮಾದರಿಯ ಸರ, ಚಿನ್ನ–ವಜ್ರ ಎರಡನ್ನೂ ಸೇರಿಸಿ ಮಾಡಿದ ಕಫ್ಸ್, ವೈವಿಧ್ಯಮಯ ಹರಳುಗಳನ್ನು ಚಿನ್ನದ ದಾರದಲ್ಲಿ ಪೋಣಿಸಿ ಮಾಡಿದ ಸರ.. ಇವೆಲ್ಲವೂ ಕಾಕ್‌ಟೈಲ್ ಆಭರಣದ ವಿಶೇಷತೆ' ಎನ್ನುತ್ತಾರೆ 'ಆಭರಣ ಜ್ಯುವೆಲ್ಲರಿ'ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರತಾಪ್ ಕಾಮತ್.

ಸಾಂಪ್ರದಾಯಿಕತೆಗೂ ಒತ್ತು ನೀಡಿರುವ ಈ ಮಾದರಿಯ ಆಭರಣ ಎರಡೂ ಮನೋಭಾವದವರಿಗೂ ಸೂಕ್ತವಾದುದು. ಉಡುಪಿಗೆ ಮ್ಯಾಚಿಂಗ್ ಮಾಡಿಕೊಳ್ಳಲು ರೂಬಿ, ಪಚ್ಚೆ, ನೀಲ, ಮುತ್ತು, ಹವಳದಂತಹ ಬಣ್ಣಬಣ್ಣದ ಹರಳುಗಳಿಂದ ಕೂಡಿದ ಸುಂದರ ಆಭರಣ ಈ ಸಂಗ್ರಹದ ವೈಶಿಷ್ಟ್ಯ. ಅಪ್ಪಟ ಚಿನ್ನದ ಮೇಲೆ ಆಕ್ಸಿಡೈಸ್ ಫಿನಿಶಿಂಗ್‌ನಲ್ಲಿ ಹರಳುಗಳನ್ನು ಕೂರಿಸಿ ಮಾಡಿದ ಒಡವೆ ಇದೀಗ ಆಭರಣ ಪ್ರಪಂಚದಲ್ಲಿ ಲೇಟೆಸ್ಟ್ ಟ್ರೆಂಡ್. ನಿತ್ಯ ಬಳಕೆಗೂ ಇದು ಯೋಗ್ಯವಾದದ್ದು. ಪಾರ್ಟಿ, ಫಂಕ್ಷನ್‌ವೇರ್‌ಗೂ ಕಾಕ್‌ಟೈಲ್ ಆಭರಣ ಧರಿಸಿ ವಿಭಿನ್ನವಾಗಿ ಕಾಣಬಹುದು.

■ ಅವನೀಶ್